International Journal of Kannada Research
www.kannadajournal.com

ISSN: 2454–5813
IJKR 2022; 8(2): 79-80
© 2022 IJKR
www.kannadajournal.com
Received: 07-02-2022
Accepted: 11-03-2022

**ಸುಶೀಲಾದೇವಿ ಬಿ ಬೆಡಗೇರಿ**
ಪ್ರಾಧ್ಯಾಪಕರು, ಕನ್ನಡ
ಉಪನ್ಯಾಸಕರು, ಕೆಎಲ್ಇಯ
ಜಗದ್ಗುರು ಗಂಗಾಧರ,
ವಾಣಿಜ್ಯ ಕಾಲೇಜು,
ಹುಬ್ಬಳ್ಳಿ, ಕರ್ನಾಟಕ, ಭಾರತ

Corresponding Author:
**ಸುಶೀಲಾದೇವಿ ಬಿ ಬೆಡಗೇರಿ**
ಪ್ರಾಧ್ಯಾಪಕರು, ಕನ್ನಡ
ಉಪನ್ಯಾಸಕರು, ಕೆಎಲ್ಇಯ
ಜಗದ್ಗುರು ಗಂಗಾಧರ,
ವಾಣಿಜ್ಯ ಕಾಲೇಜು,
ಹುಬ್ಬಳ್ಳಿ, ಕರ್ನಾಟಕ, ಭಾರತ

# ಸಾವಿರಾರು ನದಿಗಳು

## ಸುಶೀಲಾದೇವಿ ಬಿ ಬೆಡಗೇರಿ

### ಪರಿಚಯ
ಶತಶತಮಾನಗಳಿಂದ ಎಲ್ಲ ಬಗೆಯ ಶೋಷಣೆ ದಬ್ಬಾಳಿಕೆಗೆ ಒಳಗಾಗಿ ನರಳಿ ನಲುಗಿ ಹೋದ ಜನಾಂಗದ ಪ್ರತಿಭಟನೆಯನ್ನು ಶೋಷಣೆ ವಿರುದ್ಧ ಅವರ ಬಂಡಾಯವನ್ನು ಜಗತ್ತಿಗೆ ಸಾರುತ್ತದೆ. ಕಡೆಗಣಿಸಲ್ಪಟ್ಟ ಸಾಂಕೇತಿಕ ಧ್ವನಿ ಹೊಸ ಯುಗ ಧರ್ಮವೊಂದಕ್ಕೆ ಹೊಸದನ್ನು ಅರ್ಥೈಸಿದ್ದಾರೆ. ಶೋಷಿಕರಲ್ಲಿ ಜಾಗೃತಿಯುಂಟಾಗುತ್ತಿರುವುದನ್ನು ಗಮನಿಸದೇ ಇಲ್ಲ.

ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು
ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತ್ತಿರಯವ ಕಣ್ಣಗಳು
ಹಗಲು ರಾತ್ರಿಗಳನು ಸೀಳಿ ನಿದ್ರೆಯನ್ನು ಒದ್ದರು
ಕಂಬಳಿಗಳು ಕರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ

ಹೀಗೆ ಕೆಳಸ್ತರದ ಶೋಷಿತರ ಜನರ ಬದುಕು ಸಿದ್ಧಲಿಂಗಯ್ಯನವರ ಕಾವ್ಯದ ಆತ್ಮವಾಗಿದ್ದರೆ ಚಿತ್ತವತ್ತಾದ ಶಕ್ತಿಯುತ ಭಾಷೆ ಅದರ ಸಾಧನೆ ಸಂಪತ್ತಾಗಿದೆ. ಒಂದು ಹಿಡಿ ಸಮುದಾಯವೇ ಮಾತನಾಡುತ್ತದೆ. ತನ್ನ ಮತ್ತು ಸಮಾಜದ ನಡುವಣ ಸಂಬಂಧವನ್ನು ವಿಶ್ಲೇಷಿಸುತ್ತದೆ. ಹಾಗೂ ಅಲ್ಲಿನ ಅಸಮಾನತೆ ಶೋಷಣೆಗಳ ವಿರುದ್ಧ ಪ್ರತಿಭಟಿಸುತ್ತದೆ. ಕವಿಯ ಭಾಷೆ ಉತ್ಪ್ರೇಕ್ಷಿಸುವ ಕೆರಳಿಸುವ ಭಾಷೆಯಾಗಿದೆ. ಮತ್ತು ರೋಷ ಆಕ್ರೋಶ ನೋವಿನ ಭಾಷೆಯನ್ನು ಸಾರ್ವಜನಿಕರ ಭಾಷೆಯನ್ನಾಗಿ ನೋಡಬಹುದು. ಈ ಹಾಡು ಚರಿತ್ರೆಯ ಅಮಾನವೀಯತೆಯನ್ನು ಹಿಡಿಯುವ ಒಂದು ಶೈಲಿಯೂ ಆಗಿದೆ. ಈ ಕವನದಲ್ಲಿ ರೋಷವಾಗಲೀ ನೋವಾಗಲೀ ವೈಯಕ್ತಿಕವಲ್ಲವೆಂದು ಕವನದ ಭಾಷೆಯೂ ಸ್ಪಷ್ಟಪಡಿಸುತ್ತದೆ. ಇಲ್ಲಿ ನೋವಿನ ಭಾಷೆಗೆ ಚರಿತ್ರೆಯ ನೆನಪಿರುವಂತೆ ಆಕ್ರೋಶದ ಭಾಷೆಗೆ ಸಮುದಾಯದಲ್ಲಿ ಮೂಡುತ್ತಿರುವ ಹೊಸ ದೃಡವಾದ ಆತ್ಮಪ್ರತ್ಯಯವನ್ನು ಸೂಚಿಸುವ ಶಕ್ತಿಯೂ ರೂಪಗೊಂಡಿರುವದನ್ನೂ ಗುರುತಿಸಬಹುದು. ದಲಿತರ ರೊಚ್ಚನ್ನು ಕಾವ್ಯವನ್ನಾಗಿಸಿದರು. ಶತಶತಮಾನಗಳ ಅನ್ಯಾಯ ಅನಾದರಗಳನ್ನು ಕಣ್ಣು ಮುಂದೆ ನಿಲ್ಲಿಸುವಂತೆ ಸಮರ್ಥವಾಗಿ ನಿರೂಪಿಸಿದ್ದಾರೆ. ಈ ಕವನದಲ್ಲಿ ಜನರ ಕಣ್ತೆರೆಸುವ ಚಿಕಿತ್ಸಕ ಗುಣವೂ ಇದೆ. ದಲಿತರಲ್ಲಿ ಆತ್ಮವಿಶ್ವಾಸ ತುಂಬುವ ಚೈತನ್ಯವಿದೆ. ಅಸಮಾನತೆಗೆ ಮುಕ್ತಿ ತೋರಿಸುವುದರ ಜೊತೆಗೆ ಸಮಾನತೆಗೆ ಹೆಚ್ಚು ಒತ್ತು ಕೊಡುವ ಹಾಗೆ ಧಿಕ್ಕಾರ ಶೋಷಣೆ ಆಕ್ರೋಶಗಳನ್ನು ವ್ಯಕ್ತಪಡಿಸಿದ್ದಾರೆ. ಹೋರಾಟದ ಮೂಲಕ ಅಸಮಾನತೆಗೆ ನಾಂದಿ ಹಾಕಿದವರೆಂದರೆ ಸಿದ್ಧಲಿಂಗಯ್ಯ ಕವಿ ಕ್ರಾಂತಿಯ ಕಹಳೆಯನ್ನು ಮೊಳಗಿಸಿದರು.
ಭಾರತದ ಪ್ರಭುತ್ವವು ಧರ್ಮದ ಆಧಾರದಲ್ಲಿ ನಿರ್ಧಾರಗೊಳ್ಳುವದನ್ನು ಋತುಮಾನದೊಳಗೆ ವಿರೋಧಿಸುತ್ತದೆ. ಹಾಗೂ ಪೌರತ್ವ ತಿದ್ದುಪಡಿ ಹಿಂದೆತೆಗೆಯುವಂತೆ ಆಗ್ರಹಿಸುತ್ತದೆ. ದಲಿತರ ಮೇಲೆ ಇದ್ದ ಅಭಿಮಾನ ಪ್ರೀತಿಯನ್ನು ಕಾಣಬಹುದು. ದಲಿತರ ಸಹಕಾರಕ್ಕೆ ಪಟ್ಟಶ್ರಮದ ಹಾದಿಯನ್ನು ತಿಳಿಸಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ಸಮಾಜದಲ್ಲಿನ ಅಸಮಾನತೆಗಳ ಬಗ್ಗೆ ತನ್ನೊಳಗೆ ಮೊಳೆಯುತ್ತಿದ್ದ ಸಿಟ್ಟು ಆಕ್ರೋಶಗಳನ್ನು ವ್ಯಕ್ತಪಡಿಸಲು ಬರೆದ ಕಾವ್ಯ ಸಾವಿರಾರು ಧ್ವನಿಗಳನ್ನು ಕೂಡಿಸಿ ಗುಡಿಸಲಿನಿಂದ ಅರಮನೆಗೆ ಪ್ರಯಾಣಿಸಿದರು.

ನೋವಿನ ಮೂಲವಾದ ಶೋಷಣೆ ಅಸಹಾಯಕತೆ ರೊಚ್ಚು ಪ್ರತಿಭಟನೆಗಳೆಲ್ಲವನ್ನೂ ತೀವ್ರ ಸಂವೇದನೆಯಿಂದ ಬರೆಯುತ್ತಾ ಬಂದರು. ಒಡಲಾಳದ ಅಸಹಾಯಕತೆ ಅನಾವರಣಗೊಂಡಿರುವುದು ಅವರ ಸಂವೇದನೆ ಮತ್ತು ಪ್ರತಿಭೆಯ ಸಹಜ ಸ್ಥಿತಿಯಾಗಿದೆ. ರಾಜ್ಯದ ಉದ್ದಗಲಗಳಲ್ಲಿ ಜನರು ಗಟ್ಟಿಯಾಗಿ ಹಾಡುವಂತೆ ಮಾಡಿದರು. ಕ್ರಾತಿಕಾರರ ಹಾಡು ದಲಿತರ ರೈತರ ಕಾರ್ಮಿಕರ ಚಳುವಳಿ ಕುರಿತು ತುಳಿತಕ್ಕೆ ಒಳಗಾದ ಜೀವನ ಹಾಡು ಭಾಷೆಯಲ್ಲೇ ಧ್ವನಿಯಾಗಿ ಸ್ವಾಭಿಮಾನದ ಕಿಚ್ಚನ್ನು ಹಚ್ಚಲು ಕಾವ್ಯವನ್ನೇ ಖಡ್ಗವಾಗಿಸಿದರು. ಬಡವರ ನಗುವಿನ ಶಕ್ತಿ ಇದರಲ್ಲಿದೆ. ಸಮಾಜದಲ್ಲಿನ ಪರಿವರ್ತನೆ ತರುವ ಬಯಕೆಯಲ್ಲಿ ಹೋರಾಡಿದರು. ಕೆಳಗಿರುವ ಅಧೋಲೋಕ ಶೋಷಿತರ ಲೋಕವನ್ನು ಪರಿಚಯಿಸಿದ ಸಿದ್ಧಲಿಂಗಯ್ಯ ಸಾಹಿತ್ಯದ ಚಳುವಳಿಗಳು ನಿಂತ ನೀರಾಗಿದ್ದಾಗ ಇಕ್ರಲಾ ಒದಿರ್ಲಾ ಕವನದ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಹೊಸತನ ತಂದ ಕವಿಯೆಂದರೆ ಸಿದ್ಧಲಿಂಗಯ್ಯ. ದಲಿತ ಹೋರಾಟ ಸ್ವಾತಂತ್ರ್ಯ ಭ್ರಾತೃತ್ವ ಮತ್ತು ಸಾಮಾಜಿಕ ಸಮಾನತೆಗಾಗಿ ಎತ್ತರದ ದನಿಯಲ್ಲಿ ಕಾವ್ಯವನ್ನು ಹಾಡನ್ನಾಗಿ ಮಾರ್ಪಡಿಸಿದರು. ಪ್ರಜಾಸತ್ತಾತ್ಮಕ ನೀತಿಯನ್ನು ಆಧರಿಸಿದ ಹೊಚ್ಚ ಹೊಸ ಸಾಮಾಜಿಕ ಸಾಂಸ್ಕೃತಿಕ ಬದುಕಿನ ಹಂಬಲವು ಅವರ ಪ್ರಧಾನ ಕಾಳಜಿಯಾಗಿತ್ತು. ಸಿಟ್ಟು ವ್ಯಂಗ್ಯ ದಿಕ್ಕಾರ ನಿಟ್ಟುಸಿರು ವಿಡಂಬನೆ ಅರ್ಭಟ ಮತ್ತು ಆಕ್ರೋಶಗಳಿವೆ. ತಮ್ಮ ಬದುಕಿನ ನೋವು ನಲಿವುಗಳನ್ನು ಪ್ರಾಮಾಣಿಕವಾಗಿ ಮತ್ತು ಕಲಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಬಂಡಾಯವನ್ನು ಜಗತ್ತಿಗೆ ಸಾರಿತ್ತದೆ. ಮತ್ತು ಐತಿಹಾಸಿಕ ಮಹತ್ವವಿದೆ. ಕಡೆಗಣಿಸಲ್ಪಟ್ಟ ಜಗತ್ತಿನ ಸಾಂಕೇತಿಕ ದನಿ ವಾಸ್ತವ ಚಿತ್ರಣಗಳನ್ನು ಕಟ್ಟಿಕೊಡುತ್ತದೆ. ಅದರಿಂದಾಗಿ ಅವುಗಳು ಶಕ್ತಿಯುತವಾಗಿವೆ. ದಲಿತರ ಮೇಲಿನ ಶೋಷಣೆಗೆ ಕಾವ್ಯದ ಕನ್ನಡಿ ಹಿಡಿದವರು ಕವಿ ಸಿದ್ಧಲಿಂಗಯ್ಯನವರು ಆಗಿದ್ದಾರೆ. ವ್ಯಕ್ತಿಯಲ್ಲಿ ಸೂಪ್ತವಾಗಿ ಅಡಗಿರುವ ಸಹನೆ ಸಿಟ್ಟು ಮತ್ತು ಆಕ್ರೋಶಕ್ಕೂ ಹಕ್ಕು ಇದೆ ಎಂಬ ಸಂದೇಶವನ್ನು ಸೂಚಿಸುತ್ತದೆ.
ದಲಿತರು–

ಮೇಲ್ವರ್ಗದವರ ದಬ್ಬಾಳಿಕೆಗೆ ಎಲ್ಲೆಲ್ಲೊ ನಿಂತರು.
ನೀರಿನ ಹಾಗೆ ಸಮಾದಾನವಾಗಿ ನಿಂತರು.
ಶ್ರೀಮಂತರ ದನಿಗೆ ನಡುಗಿ ನಲುಗಿ ಹೋದರು

ಒಟ್ಟಾರೆಯಾಗಿ ಕವಿ ಸಿದ್ಧಲಿಂಗಯ್ಯನವರು ರಚಿಸಿರುವ ಸಾಹಿತ್ಯ ಹಸಿವು ಬಡತನ ನೋವು ಸಂಕಟ ಜಾತಿಪದ್ಧತಿ ದೌರ್ಜನ್ಯ ಮತ್ತು ದಬ್ಬಾಳಿಕೆಯನ್ನು ಅನುಭವಿಸುತ್ತಿರುವ ಪ್ರತಿಯೊಬ್ಬರಿಗೂ ಸ್ವಾಭಿಮಾನದ ಕಿಚ್ಚನ್ನು ಹೊತ್ತಿಸುವ ಸ್ಪೂರ್ತಿಯ ಸೆಲೆಗಳಾಗಿದೆ ಎಂದರೆ ತಪ್ಪಾಗಲಾರದು. ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿರದೇ ಎಲ್ಲಾ ವರ್ಗದ ಶೋಷಿತರಿಗೂ ತಲುಪುವಂತಿದೆ.

**ಗ್ರಂಥ ಋಣ**

೧. ಸಾವಿರಾರು ನದಿಗಳು–ಡಾ.ಸಿದ್ಧಲಿಂಗಯ್ಯ
೨. ಅಂತರ್ ಜಾಲದ ಮಾಹಿತಿ

**ಅಡಿ ಟಿಪ್ಪಣೆ**

1. ಸಾವಿರಾರು ನದಿಗಳು–ಪು.ಸಂ. –೩೩